**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 24/2015**

**ದೋ.ಸಾ. : 18 ಪ್ರಾ.ಸಾ. : 16**

ಸಾಕ್ಷಿಯ ಹೆಸರು : ಫರೀದಾ
ಗಂಡನ ಹೆಸರು : ದಾದಾಪೀರ
ವಯಸ್ಸು : 51 ವರ್ಷ
ಉದ್ಯೋಗ : ಮನೆವಾರ್ತೆ
ವಾಸ : ಕೆ ಬಿ ನಗರ ಹುಬ್ಬಳ್ಳಿ

**ದಿನಾಂಕಃ 26-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದೋಸಾ-17 ದಾದಾಪೀರ ನನ್ನ ಗಂಡನಾಗಬೇಕು. ದೋಸಾ-16 ನನ್ನ ದೊಡ್ಡ ಅಣ್ಣ. ದೋಸಾ-22 ನನ್ನ 2 ನೇ ಮಗಳು . ದೋಸಾ-21 ನನ್ನ ಮಗಳು ದೋಸಾ-22 ಳ ಗಂಡ . ಮೃತ ಶಬ್ರಿನ್ ನನ್ನ ಹಿರಿಯ ಮಗಳು . ದೋಸಾ-19 ನನ್ನ ಹಿರಿಯ ಮಗಳು ಶಬ್ರಿನ್ ಳ ಗಂಡ. ದೋಸಾ-20 ನನ್ನ ಮೃತ ಮಗಳಾದ ಶಬ್ರಿನ್ ಳ ಮಗ . ಶಬ್ರಿನ್ ಳ ಮದುವೆ ದೋಸಾ-19 ಜೊತೆ 2009 ನೇ ಇಸವಿಯಲ್ಲಿ ಆಗಿತ್ತು . ಮದುವೆ ನಂತರ ಆಕೆ ಹೊನ್ನಾವರದಲ್ಲಿ ಆಕೆಯ ಗಂಡನ ಮನೆಯಲ್ಲಿ ವಾಸ ಇದ್ದಳು. ಆಕೆಯ ಗಂಡನಿಗೆ ಅವನೂ ಸೇರಿಸಿ 4 ಜನ ಸಹೋದರರು ಹಾಗೂ ಒಬ್ಬ ಸಹೋದರಿ ಇದ್ದರು. ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಗೊತ್ತು . ಆಕೆ ದೋಸಾ-19 ರವರ ಅಣ್ಣನ ಹೆಂಡತಿ . ಆಕೆ ಅವರ ಮನೆಯಲ್ಲಿ ಹಿರಿಯ ಸೊಸೆ . ನನ್ನ ಮೃತ ಮಗಳು ಆ ಮನೆಯಲ್ಲಿ ಕೊನೆಯ ಸೊಸೆ ಆಗಿದ್ದಳು. ದೋಸಾ-8 ನನ್ನ ಮಗಳ ಅತ್ತೆ . ಅವರು ನಾಲ್ಕೂ ಜನ ಸೊಸೆಯರ ಪೈಕಿ ಮೂವರು ಹೊನ್ನಾವರದಲ್ಲಿ ಅವರ ಗಂಡಂದಿರ ಮನೆಯಲ್ಲಿ ವಾಸ ಇದ್ದರು. ಒಬ್ಬ ಸೊಸೆ ಗಂಡನ ಜೊತೆ ಹೊರದೇಶದಲ್ಲಿ ವಾಸ ಇದ್ದರು. ನನ್ನ ಮಗಳ ಗಂಡ ಮತ್ತು ಅವನ ಸಹೋದರರು ನಾಲ್ಕೂ ಜನ ಹೊರ ದೇಶದಲ್ಲಿಯೇ ಕೆಲಸ ಮಾಡುತ್ತಿದ್ದರು. ಸದರಿ ಮೂರು ಜನ ಸೊಸೆಯರು ಹೊನ್ನಾವರದಲ್ಲಿ ಒಂದೇ ಮನೆಯಲ್ಲಿ ಬೇರೆ ಬೇರೆ ಕೊಠಡಿಯಲ್ಲಿ ವಾಸ ಇದ್ದಾರೆ ಹಾಗೂ ಬೇರೆ ಬೇರೆಯಾಗಿ ಅಡಿಗೆ ಮಾಡಿಕೊಳ್ಳುತ್ತಿದ್ದರು. ನನ್ನ ಮಗಳು ಆ ಮನೆಯಲ್ಲಿ ಮಾಳಿಗೆಯಲ್ಲಿ ಇರುವ ಕೊಠಡಿಯಲ್ಲಿ

ವಾಸ ಇದ್ದಳು. ಆರೋಪಿ ಆ ಮನೆಯಲ್ಲಿ ಮಾಳಿಗೆಯಲ್ಲಿ ಮತ್ತು ಕೆಳ ಅಂತಸ್ತಿನಲ್ಲಿ ಎರಡೂ ಕಡೆ ಕೊಠಡಿಗಳಲ್ಲಿ ವಾಸ ಇದ್ದಳು. ಮಾಳಿಗೆಯಲ್ಲಿ ಮೊದಲು ನನ್ನ ಮಗಳು ವಾಸ ಇದ್ದ ಕೊಠಡಿ ಇರುತ್ತದೆ ನಂತರ ಆರೋಪಿ ವಾಸ ಇದ್ದ ಕೊಠಡಿ ಬರುತ್ತದೆ . ಆ ಮನೆಯಲ್ಲಿ ಅವರು ಕೊಠಡಿಗೆ ಮಹಡಿಯಲ್ಲಿ ಹೋಗಲು ಮನೆ ಒಳಗಿನಿಂದಲೇ ಮೆಟ್ಟಿಲು ಇರುತ್ತದೆ . ನನ್ನ ಮಗಳು ಆ ಮನೆಯಲ್ಲಿ ಅಡಿಗೆ ಮಾಡಲು ಅನಿಲ ಇಂಧನ ಉಪಯೋಗಿಸುತ್ತಿದ್ದಳು. ಸೀಮೆ ಎಣ್ಣೆಯನ್ನು ಆಕೆ ಯಾವುದಕ್ಕೂ ಬಳಸುತ್ತಿರಲಿಲ್ಲ. ನನ್ನ ಮಗಳು ಮೃತಪಡುವುದಕ್ಕೆ ಮೂರು ವರ್ಷದ ಹಿಂದೆ ಆಕೆಯ ಗಂಡ ದೋಸಾ–19 ಕುವೈತ್ ಗೆ ನೌಕರಿಗೆ ಹೋಗಿ ಅಲ್ಲಿಯೇ ಇದ್ದ. ನನ್ನ ಮಗಳಿಗೆ ಇಬ್ಬರು ಮಕ್ಕಳು. ನನ್ನ ಮಗಳು ಶಬ್ರಿನ್ ಮತ್ತು ಆರೋಪಿ ನಡುವೆ ಸಂಬಂಧ ಸರಿ ಇರಲಿಲ್ಲ ಯಾವಾಗಲೂ ಅವರ ನಡುವೆ ಜಗಳ ಆಗುತ್ತಿತ್ತು. ಮಕ್ಕಳ ವಿಚಾರದಲ್ಲಿ , ಸಂಸಾರದ ವಿಚಾರದಲ್ಲಿ, ಆ ಮನೆಯನ್ನು ಅವರು ಹೊಸದಾಗಿ ಕಟ್ಟಿದ್ದು ಮನೆ ನಿರ್ಮಾಣಕ್ಕೆ ನನ್ನ ಅಳಿಯ ಕಡಿಮೆ ಹಣ ಅವನ ಪಾಲಿನಿಂದ ಕೊಟ್ಟಿದ್ದ ಎಂಬ ವಿಚಾರದಲ್ಲಿ ಮಾತು ಮಾತಿಗೆ ಅವರ ನಡುವೆ ಜಗಳ ಆಗುತ್ತಿತ್ತು . ಆ ವಿಚಾರವನ್ನು ನನ್ನ ಮೃತ ಮಗಳು ನನಗೆ ಆಕೆ ನನ್ನ ಮನೆಗೆ ಬಂದಾಗ ಮತ್ತು ನಾನು ಆಕೆ ಮನೆಗೆ ಹೋದಾಗ ಮತ್ತು ಫೋನಿನ ಮೂಲಕ ಸಹ ಹೇಳುತ್ತಿದ್ದಳು. ಆ ರೀತಿ ನನ್ನ ಮಗಳು ನನಗೆ ವಿಷಯ ತಿಳಿಸಿದಾಗ ನಾನು ಆಕೆಗೆ ಆಕೆಯ ಗಂಡನಿಗೆ ಹೇಳುವಂತೆ, ಆಕೆಯ ಅತ್ತೆ ಮಾವನಿಗೆ ಹೇಳುವಂತೆ ಬುದ್ಧಿ ಹೇಳುತ್ತಿದ್ದೆ. ಅಲ್ಲದೇ ಆಕೆಯ ಗಂಡ ಬಂದ ಮೇಲೆ ಆಕೆಯನ್ನು ಪ್ರತ್ಯೇಕವಾಗಿ ಮನೆ ಮಾಡಿ ಇಡುವಂತೆ ಹೇಳೋಣಾ ಎಂದು ಆಕೆಗೆ ಹೇಳಿದ್ದೆ. ನನ್ನ ಮಗಳು ಮೃತ ಪಡುವುದಕ್ಕೆ 7–8 ತಿಂಗಳ ಹಿಂದೆ ಆಕೆ ಮತ್ತು ಆರೋಪಿ ನಡುವೆ ಜಗಳ ಆಗಿ ಆ ಬಗ್ಗೆ ಪೊಲೀಸ್ ಠಾಣೆಗೆ ಪ್ರಕರಣ ದಾಖಲಾಗಿತ್ತು . ಆ ವಿಚಾರವನ್ನು ನನ್ನ ಮೃತ ಮಗಳು ನನಗೆ ಹೇಳಿದ್ದಳು. ನನ್ನ ಮಗಳು ಮೃತಪಡುವುದಕ್ಕೆ ಮೊದಲು ಕೊನೆಯದಾಗಿ ಅಕ್ಟೋಬರ್ 2014 ರಲ್ಲಿ ತನ್ನ ಮಕ್ಕಳ ಜೊತೆ ನನ್ನ ಮನೆಗೆ ಅಂದರೆ ತವರು ಮನೆಗೆ ಬಂದಿದ್ದಳು. ಆಗಲೂ ಆಕೆ ಆರೋಪಿ ತನಗೆ ತಂಟೆ ತಕರಾರು ಮಾಡುತ್ತಾಳೆ ಎಂದು ಹೇಳಿ ಅತ್ತು ಕೊಂಡಿದ್ದಳು. ಆಕೆಯ ಗಂಡನಿಗೆ ಫೋನಿನಲ್ಲಿ ಆಕೆಯೇ ತಿಳಿಸಿರುವುದಾಗಿ ಸಹ ಆಕೆ ನನಗೆ ಹೇಳಿದಳು ಮತ್ತು ಆಕೆಯ ಗಂಡ ಯಾವುದೇ ವಿಚಾರ ಮಾಡಲಿಲ್ಲ ಎಂದು ಸಹ ನನಗೆ ತಿಳಿಸಿದ್ದಳು.

2. ದಿನಾಂಕ 11.02.2015 ರಂದು ಬೆಳಿಗ್ಗೆ 11.00 ಗಂಟೆಗೆ ನನ್ನ ಮೃತ ಮಗಳು ಶಬ್ರಿನ್ ದೂರವಾಣಿ ಕರೆ ಮಾಡಿ ಆರೋಪಿ ಆಕೆ ಜೊತೆ ಜಗಳ ಮಾಡುತ್ತಿದ್ದಾಳೆ ತನಗೆ ಬೇರೆ ಕಡೆ ಎಲ್ಲಿಯಾದರೂ ಮನೆ ನೋಡು ಎಂದು ಹೇಳಿದಳು. ಆ ದಿನ ನಾನು, ನನ್ನ ಗಂಡ ಮತ್ತು ನನ್ನ ಎರಡು ಸಣ್ಣ ಮಕ್ಕಳು ಯಲ್ಲಾಪುರದಲ್ಲಿ ನನ್ನ ಅಣ್ಣ ದೋಸಾ–16 ರವರ ಮನೆಗೆ ಬಂದಿದ್ದೆವು . ಅಲ್ಲಿ ಇರುವಾಗ ಆ ದಿನ ಸಂಜೆ 7.00 ರಿಂದ 7.30 ಗಂಟೆ ಸಮಯದಲ್ಲಿ ಮೃತ ಶಬ್ರಿನ್ ನನಗೆ ದೂರವಾಣಿ ಕರೆ ಮಾಡಿ ಆಕೆಗೆ ಶಬ್ರಿನಾ (ಆರೋಪಿ) ಬೆಂಕಿ ಹಚ್ಚಿ ಸುಟ್ಟಳು ಎಂದು ಮಾತ್ರ ಹೇಳಿದಳು ತಕ್ಷಣ ಫೋನ್ ಸಂಪರ್ಕ ಕಡಿತವಾಯಿತು . ನಂತರ ನಾನು ಎಷ್ಟು ಬಾರಿ ಕರೆ ಮಾಡಿದರೂ ಫೋನ್ ರಿಂಗ್ ಆಯಿತು ಆದರೆ ಎತ್ತಲಿಲ್ಲ. ನಂತರ ದೋಸಾ–21 ನನ್ನ ಅಳಿಯ ನನ್ನ ಸಹೋದರ ದೋಸಾ–16 ರವರಿಗೆ ಸುಮಾರು ರಾತ್ರಿ 8.00 ಗಂಟೆಗೆ ಕರೆ ಮಾಡಿ ನನ್ನ ಮಗಳು ಶಬ್ರಿನ್ ಳು ಸುಟ್ಟು ಹೋಗಿದ್ದಾಳೆ ಆಕೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ ಎಂದು ಹೇಳಿದ. ಆ ವಿಚಾರವನ್ನು ನನ್ನ ಅಣ್ಣ ದೋಸಾ–16 ನನ್ನ ಗಂಡನಿಗೆ ಮತ್ತು ಎಲ್ಲರಿಗೆ ತಿಳಿಸಿದ. ಆಗ ನಾವು ದೋಸಾ–16 ರವರ ಮನೆಯಲ್ಲಿಯೇ ಇದ್ದೆವು . ನಾವು ಗಾಡಿ ಮಾಡಿಕೊಂಡು ಹೊನ್ನಾವರಕ್ಕೆ ಹೋಗಬೇಕು ಎಂದು ಪ್ರಯತ್ನಿಸುತ್ತಿದ್ದಾಗ ಅವರೇ ತುರ್ತು ಚಿಕಿತ್ಸಾ ವಾಹನದಲ್ಲಿ ಹುಬ್ಬಳ್ಳಿಯ ಆಸ್ಪತ್ರೆಗೆ ನನ್ನ ಮಗಳನ್ನು ಕರೆ ತರುತ್ತಿರುವುದಾಗಿ ಹೇಳಿದರು. ನಂತರ ತುರ್ತು ಚಿಕಿತ್ಸಾ ವಾಹನ ಯಲ್ಲಾಪುರಕ್ಕೆ ಬಂತು. ಯಲ್ಲಾಪುರದಿಂದ ಅದರಲ್ಲಿ ಕರೆ ತಂದಿದ್ದ ನನ್ನ ಮಗಳು ಶಬ್ರಿನ್ ಳನ್ನು ದೋಸಾ–21 ಮತ್ತು 22 ರವರು ಕರೆದುಕೊಂಡು ಬಂದಿದ್ದರು. ಯಲ್ಲಾಪುರದಿಂದ ನಾನು ಮತ್ತು ನನ್ನ ಗಂಡ ಸದರಿ ತುರ್ತು ಚಿಕಿತ್ಸಾ ವಾಹನದಲ್ಲಿ ಅವರೊಟ್ಟಿಗೆ ಯಲ್ಲಾಪುರದಿಂದ ಹುಬ್ಬಳ್ಳಿಯ ಕೆ ಎಂ ಸಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು . ಹೊನ್ನಾವರದಿಂದ ಹುಬ್ಬಳ್ಳಿಗೆ ಹೋಗಬೇಕಾದರೆ ಯಲ್ಲಾಪುರ ಮಾರ್ಗವಾಗಿಯೇ ಹೋಗಬೇಕಾಗಿರುತ್ತದೆ . ತುರ್ತು ಚಿಕಿತ್ಸಾ ವಾಹನದಲ್ಲಿ ನನ್ನ ಮಗಳನ್ನು ನೋಡಿದಾಗ ಆಕೆಯ ತಲೆಗೆ ಸುಟ್ಟು ಗಾಯ ಆಗಿತ್ತು . ಆಕೆಯ ತಲೆ ಕೂದಲು ಸುಟ್ಟಿತ್ತು. ಆಕೆಯ ಬೆನ್ನು ಸುಟ್ಟಿತ್ತು . ಆಕೆ ಚೆನ್ನಾಗಿ ಮಾತನಾಡುತ್ತಿದ್ದಳು.

(ಈ ಹಂತದಲ್ಲಿ ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

(ಸಾಕ್ಷಿಯು ಹಿಂದಿ ಭಾಷೆಯಲ್ಲಿ ಸಾಕ್ಷ್ಯ ನುಡಿದಿದ್ದು ಶ್ರೀಮತಿ ಎ ಎಂ ಆರ್ , Chief Legal Aid Defence Counsel ರವರಿಗೆ ಹಿಂದಿ ಮತ್ತು ಕನ್ನಡ ಭಾಷೆ ಎರಡೂ ಚೆನ್ನಾಗಿ ಬರುತ್ತಿದ್ದು ಆ ಬಗ್ಗೆ ಅವರ ಪ್ರಮಾಣಬದ್ಧ ಹೇಳಿಕೆ ಸಹ ದಾಖಲು ಮಾಡಿಕೊಳ್ಳಲಾಗಿದ್ದು ಅವರು ಕನ್ನಡದಲ್ಲಿ ಕೇಳಿದ ಅಭಿಯೋಜಕರ ಪ್ರಶ್ನೆಯನ್ನು ಸಾಕ್ಷಿಗೆ ಹಿಂದಿಯಲ್ಲಿ ಅನುವಾದ ಮಾಡಿರುತ್ತಾರೆ ಮತ್ತು ಸಾಕ್ಷಿಯು ಹಿಂದಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ಅನುವಾದ ಮಾಡಿರುತ್ತಾರೆ. ಸದರಿ ವಕೀಲರಿಗೆ ಹಿಂದಿ ಮತ್ತು ಕನ್ನಡ ಎರಡೂ ಭಾಷೆ ಬರುತ್ತದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ ).